**ಸಾಕ್ಷಿಗೆ ದಿನಾಂಕ 05-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

ನಾನು ಮತ್ತು ನನ್ನ ತಂದೆಯು ಪ್ರತ್ಯೇಕವಾಗಿ ವಾಸಿಸುತ್ತೇವೆ. ನನ್ನ ಸ್ವಂತ ಮನೆ ಇರುತ್ತದೆ. ಅದರ ಮೌಲ್ಯ ಎಷ್ಟಿರುತ್ತದೆಂದು ಮಾಹಿತಿ ಇರುವುದಿಲ್ಲ. ನನ್ನ ಬಳಿ ಕೆ ಎ 43-ಎಮ್ 5957 ಚೆರ್ವಲೆಟ್ ಕಾರು ಆಗಿರುತ್ತದೆ. ಅದನ್ನು 2014 ರಲ್ಲಿ 12 ಲಕ್ಷ ರೂ. ಗಳಿಗೆ ಖರೀದಿಸಿರುತ್ತೇನೆ. ನನ್ನ ಅವಶ್ಯಕತೆಗೆ ನನ್ನ ತಂದೆಯ ಬಳಿ ಹಣ ತೆಗೆದುಕೊಳ್ಳುವುದಿಲ್ಲ. ನಿಪಿ 6 ಮತ್ತು 7 ರಲ್ಲಿ ಇದಕ್ಕೂ ಮೊದಲು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

ನಾನು ನಿಪಿ 6 ರಲ್ಲಿರುವ ಆದಾಯ ತೆರಿಗೆಯನ್ನು 26-07-2018 ರಂದು ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ಆರೋಪಿಗೆ ಕಾನೂನು ನೋಟಿಸ್ ನೀಡಿದ ನಂತರ ಸದರಿ ದಾಖಲೆಯನ್ನು ಸುಳ್ಳು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾವು ಮೊದಲು ನ್ಯಾಯಾಲಯಕ್ಕೆ ಸಲ್ಲಿಸಿದಂತಹ ನಿಪಿ 7 ರ ಜೆರಾಕ್ಸ ಪ್ರತಿಯಲ್ಲಿ ಸೀಲ್ ಸಹಿ ಇರುವುದಿಲ್ಲ ಎಂದರೆ ಸರಿ.

ನಿಪಿ 6 ರಲ್ಲಿ ನನ್ನ ವಾರ್ಷಿಕ ಆದಾಯವು 3,81,157 ಒಟ್ಟು ಆದಾಯವೆಂದು ತೋರಿಸುತ್ತಾರೆ. ನಿಪಿ 7 ರಲ್ಲಿ ನನ್ನ ಸಂಬಳದಿಂದ ಹಾಗೂ ಮನೆಯ ಆಸ್ತಿಗಳಿಂದ ಯಾವುದೇ ಆದಾಯ ಇಲ್ಲ ಎಂದು ತೋರಿಸುತ್ತಾರೆ ಎಂದರೆ ಸರಿ. ನಿಪಿ 7 ರಲ್ಲಿ ನನ್ನ ವ್ಯಾಪಾರದಿಂದ ಯಾವುದೇ ಆದಾಯವಿರುವುದಿಲ್ಲ ಎಂದು ತೋರಿಸುತ್ತಾರೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತಿಲ್ಲ. ನಿಪಿ 7 ರಲ್ಲಿ ಬಡ್ಡಿಯ ಮೂಲಗಳಿಂದ ಆದಾಯ ಬಂದಿರುತ್ತದೆ ಎಂದು ನಮೂದು ಇರುತ್ತದೆ ಅದರ ಬಗ್ಗೆ ವಿವರಣೆ ನೀಡಿ ಎಂದರೆ ಮೊದಲು ನಾನು ಆರ್ಥಿಕ ವ್ಯವಹಾರಗಳನ್ನು ಮಾಡುತ್ತಿದ್ದೆ ಹಾಗೂ ನಾನು ಮಾಡುತ್ತಿದ್ದ ವ್ಯಾಪಾರಗಳಿಂದ ಬಂದಿರುತ್ತದೆಂದು ನುಡಿಯುತ್ತಾರೆ. ನಿಪಿ 7 ರಲ್ಲಿ ಕಲಂ 80 ಜಿ ಜಿ ರಲ್ಲಿ ಹಣವು ಕಡಿತಗೊಳಿಸಲಾಗಿರುತ್ತದೆಂದರೆ ಆದಾಯ ತೆರಿಗೆ ಖಾಯ್ದೆಯ ಪ್ರಕಾರ ನಾನು ಅದರ ಲಾಭವನ್ನು ಪಡೆಯಲು ಸಲ್ಲಿಸಿರುತ್ತೇನೆ. ಸದರಿ ಕಲಂನಲ್ಲಿ ಲಾಭವನ್ನು ಪಡೆಯಲು ಯಾರ ಬಳಿ ಸ್ವತ್ತು ಇರುವುದಿಲ್ಲ ಅವರು ಮಾತ್ರ ಪಡೆಯಬಲ್ಲರು ಎಂದರೆ ಸರಿಯಲ್ಲ.

ನಿಪಿ 7 ರಲ್ಲಿರುವ ಒಟ್ಟು ಕ್ಯಾಪಿಟಲ್ ಮೊತ್ತವು ನನ್ನ ವ್ಯಾಪಾರದಿಂದ ಬಂದಿರುತ್ತದೆ. ಪಿಠೋಪಕರಣಗಳ ಹಾಗೂ ಮನೆಯ ಸಾಮಗ್ರಿಗಳ ಮೌಲ್ಯವನ್ನು ನಾನೇ ಅಂದಾಜಿನ ಮೇಲೆ ಮಾಡಿರುತ್ತೇನೆ. ನಿಪಿ 7 ರ ದಾಖಲೆಯನ್ನು ನನ್ನ ಹೇಳಿಕೆಯ ಆಧಾರದ ಮೇರೆ ಯಾವೂದೇ ದಾಖಲೆಗಳನ್ನು ಪರಿಶೀಲಿಸದೇ ತಯಾರು ಮಾಡಿರುತ್ತಾರೆಂದರೆ ಸರಿಯಲ್ಲ. ಆದಾಯ ತೆರಿಗೆ ಪಾವತಿಯಲ್ಲಿ ಆರೋಪಿಗೆ ಹಾಗೂ ವಿಜಯ ಕುಮಾರ್ ಎಂಬುವರಿಗೆ ಸಾಲ ನೀಡಿದರ ಬಗ್ಗೆ ನಮೂದು ಇರುವುದಿಲ್ಲ ಆದರೆ ಬ್ಯಾಲನ್ಸ್ ಸೀಟ್ ನಲ್ಲಿ ನಮೂದು ಇರುತ್ತದೆ. ಅದರಲ್ಲಿ ಯಾವ ಮೂಲದಿಂದ ಹಾಗೂ ಯಾವ ರೀತಿಯಲ್ಲಿ ಅವರಿಗೆ ಸಾಲವನ್ನು ನೀಡಿರುತ್ತೇನೆಂದು ತಿಳಿಸಿರುವುದಿಲ್ಲ. ಅದೇ ರೀತಿ ದಿನಾಂಕ ನಮೂದಿಸಿಲ್ಲ ಆದರೆ ಆರ್ಥಿಕ ವರ್ಷ

ನಮೂದಿರುತ್ತದೆ. ಸದರಿ ದಾಖಲೆಯಲ್ಲಿ ಬೇರೆಯವರಿಗೆ ಬರಬೇಕಾದ ಹಣವನ್ನು ಸಹ ನಮೂದಿಸಿಲ್ಲ.

ಆ ಸಮಯದಲ್ಲಿ SBI, HDFC and Corporation ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**